PRAMC
EIC
SE-1
SE-2
DS
EE
AEE-1
AEE-2
AEE-3

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:-ಕೆಶಿಫ್, ಕೆಆರ್‌ಡಿಸಿಎಲ್ ಮತ್ತು ಲೋಕೋಪಯೋಗಿ ಇಲಾಖೆಯ ವತಿಯಿಂದ ಅಭಿವೃದ್ಧಿಪಡಿಸಲಾದ 1329.47 ಕಿಮೀ ಉದ್ದದ ರಸ್ತೆಗಳ ಮೇಲ್ಮೈ ಪದರಗಳ ನವೀಕರಣ ಹಾಗೂ ಇತರೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತಕ್ಕೆ (ಕೆಆರ್‌ಡಿಸಿಎಲ್) ಹಣ ಬಿಡುಗಡೆ ಮಾಡುವ ಕುರಿತು.

ಓದಲಾಗಿದೆ:- 1.ಸರ್ಕಾರದ ಆದೇಶ ಸಂಖ್ಯೆ. ಲೋಇ ಇ-336 ಇಎಪಿ 2022, ದಿನಾಂಕ: 02-12-2022.
2.ಸರ್ಕಾರದ ಆದೇಶ ಸಂಖ್ಯೆ. ಲೋಇ ಇ-336 ಇಎಪಿ 2022, ದಿನಾಂಕ: 21-03-2023.
3.ಸರ್ಕಾರದ ಆದೇಶ ಸಂಖ್ಯೆ. ಲೋಇ ಇ-336 ಇಎಪಿ 2022, ದಿನಾಂಕ: 08-05-2023.
4.ಸರ್ಕಾರದ ಆದೇಶ ಸಂಖ್ಯೆ. ಲೋಇ ಇ-336 ಇಎಪಿ 2022, ದಿನಾಂಕ: 28-07-2023.
5.ವ್ಯವಸ್ಥಾಪಕ ನಿರ್ದೇಶಕರು ಕೆಆರ್‌ಡಿಸಿಎಲ್ ರವರ ಪತ್ರ ಸಂಖ್ಯೆ: ಕೆಆರ್‌ಡಿಸಿಎಲ್/ವ್ಯನಿ/ಲೆಶಾ/ಅನುದಾನ/2023-24/1331, ದಿನಾಂಕ: 18-08-2023.

* * *

**ಪ್ರಸ್ತಾವನೆ:**

ಕೆಶಿಫ್ ಮತ್ತು ಕೆಆರ್‌ಡಿಸಿಎಲ್ ವತಿಯಿಂದ ಅಭಿವೃದ್ಧಿ ಪಡಿಸಲಾದ 27 ರಾಜ್ಯ ಹೆದ್ದಾರಿ ರಸ್ತೆಗಳಲ್ಲಿ ರಸ್ತೆ ಬಳಕೆದಾರರ ಟೋಲ್ ಶುಲ್ಕ ಸಂಗ್ರಹಣೆಯನ್ನು ಮಾಡಲು ಅನುಮೋದನೆಯನ್ನು ನೀಡಲಾಗಿರುತ್ತದೆ. ಸದರಿ ರಸ್ತೆಗಳ ಮೇಲೆ ಬಳಕೆದಾರರ ಶುಲ್ಕವನ್ನು ಸಂಗ್ರಹಣೆ ಮಾಡುವುದರಿಂದ ಕೆಆರ್‌ಡಿಸಿಎಲ್ ಸಂಸ್ಥೆಯನ್ನು ಆರ್ಥಿಕವಾಗಿ ಸಧೃಡಪಡಿಸಿ, ಸಂಸ್ಥೆಯು ಸ್ವಂತ ಆದಾಯದಲ್ಲಿ ಕಾರ್ಯನಿರ್ವಹಿಸಲು ಹಾಗೂ ಸದರಿ ರಸ್ತೆಯ ಭಾಗಗಳನ್ನು ನಿರ್ವಹಿಸಲು ಅನುವಾಗಿ, ಪ್ರಗತಿಪರ ಮೂಲ ಸೌಕರ್ಯಗಳೊಂದಿಗೆ ರಾಜ್ಯ ರಸ್ತೆ ಸಂಪರ್ಕ ಜಾಲವನ್ನು ಉತ್ತಮ ಪಡಿಸಲು ಅವಕಾಶ ಕಲ್ಪಿಸಲಾಗುತ್ತಿದೆ. ರಸ್ತೆಗಳ ಅಭಿವೃದ್ಧಿಗಾಗಿ ಬ್ಯಾಂಕ್‌ಗಳಿಂದ ಪಡೆದಿರುವ ಸಾಲವನ್ನು ತೀರುವಳಿ ಮಾಡಲು ಟೋಲ್ ಆದಾಯವನ್ನು ಉಪಯೋಗಿಸಲಾಗುತ್ತಿದೆ.

ಓದಲಾದ (1) ರ ಆದೇಶದಲ್ಲಿ ಕೆಶಿಫ್, ಕೆಆರ್‌ಡಿಸಿಎಲ್ ಮತ್ತು ಲೋಕೋಪಯೋಗಿ ಇಲಾಖೆಯ ವತಿಯಿಂದ ಅಭಿವೃದ್ಧಿಪಡಿಸಲಾದ 1329.47 ಕಿಮೀ ಉದ್ದದ ರಸ್ತೆಗಳ ಮೇಲ್ಮೈ ಪದರಗಳ ನವೀಕರಣ ಹಾಗೂ ಇತರೆ ಕಾಮಗಾರಿಯನ್ನು ಕೆಆರ್‌ಡಿಸಿಎಲ್ ವತಿಯಿಂದ ಕೈಗೆತ್ತಿಕೊಳ್ಳಲು ಲೆಕ್ಕ ಶೀರ್ಷಿಕೆ 5054-03-337-0-17-160 ರಾಜ್ಯ ಹೆದ್ದಾರಿಗಳ ನವೀಕರಣ ಅಡಿಯಲ್ಲಿ ರೂ.440.00 ಕೋಟಿಗಳ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಓದಲಾದ (2), (3) ಹಾಗೂ (4) ರ ಆದೇಶದಲ್ಲಿ ಸದರಿ ಕಾಮಗಾರಿಗೆ ಲೆಕ್ಕ ಶೀರ್ಷಿಕೆ 5054-03-337-0-17-160 ರಾಜ್ಯ ಹೆದ್ದಾರಿಗಳ ನವೀಕರಣ ಅಡಿಯಲ್ಲಿ ಇಲ್ಲಿಯವರೆಗೆ ರೂ. 107.33 ಕೋಟಿಗಳನ್ನು ನಿಗಮಕ್ಕೆ ಬಿಡುಗಡೆ ಮಾಡಲಾಗಿರುತ್ತದೆ.

ಪ್ರಸ್ತುತ Working Season ಅವಧಿಯಾಗಿದ್ದು, ಬಹತೇಕ ಕಾಮಗಾರಿಗಳು ಮರುಡಾಂಬರೀಕರಣ ಕಾಮಗಾರಿಗಳಾಗಿರುವುದರಿಂದ ಮತ್ತು ಎಲ್ಲಾ ಕಾಮಗಾರಿಗಳು ಮುಕ್ತಾಯ ಹಂತದಲ್ಲಿದ್ದು, ಬಿಲ್ಲುಗಳನ್ನು ಗುತ್ತಿಗೆದಾರರಿಗೆ ಪಾವತಿಸಲು ಬಾಕಿ ಇರುವ ಅನುದಾನ ರೂ. 332.67 ಕೋಟಿಗಳ ಮೊತ್ತವನ್ನು ಲೆಕ್ಕ ಶೀರ್ಷಿಕೆ 5054-03-337-0-17-160 ರಾಜ್ಯ ಹೆದ್ದಾರಿಗಳ ನವೀಕರಣ ಅಡಿಯಲ್ಲಿ ನಿಗಮಕ್ಕೆ ಬಿಡುಗಡೆ ಮಾಡುವಂತೆ ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಡಿಸಿಎಲ್ ರವರು ಓದಲಾದ (5) ರ ಪತ್ರದಲ್ಲಿ ಕೋರಿರುತ್ತಾರೆ.

ಮೇಲಿನ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದ್ದು, ಈ ಕೆಳಗಿನಂತೆ ಆದೇಶವನ್ನು ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಲೋಇ ಇ-336 ಇಎಪಿ 2022, ಬೆಂಗಳೂರು ದಿನಾಂಕ: 25-10-2023**

ಕೆಶಿಫ್, ಕೆಆರ್‌ಡಿಸಿಎಲ್ ಮತ್ತು ಲೋಕೋಪಯೋಗಿ ಇಲಾಖೆಯ ವತಿಯಿಂದ ಅಭಿವೃದ್ಧಿಪಡಿಸಲಾದ 1329.47 ಕಿಮೀ ಉದ್ದದ ರಸ್ತೆಗಳ ಮೇಲ್ಮೈ ಪದರಗಳ ನವೀಕರಣ ಹಾಗೂ ಇತರೆ ಕಾಮಗಾರಿಗಳ ಬಾಕಿ ಬಿಲ್ಲುಗಳನ್ನು ಪಾವತಿಸಲು ಕೆಆರ್‌ಡಿಸಿಎಲ್ ಗೆ ಲೆಕ್ಕ ಶೀರ್ಷಿಕೆ 5054-03-337-0-17-160 ರಾಜ್ಯ ಹೆದ್ದಾರಿಗಳ ನವೀಕರಣ ಅಡಿಯಲ್ಲಿ ರೂ. 33.33 ಕೋಟಿಗಳನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತಕ್ಕೆ ಬಿಡುಗಡೆ ಮಾಡಲಾಗಿದೆ.

ಹೀಗೆ ಬಿಡುಗಡೆ ಮಾಡಲಾದ ಹಣವನ್ನು ಡ್ರಾ ಮಾಡಲು ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಡಿಸಿಎಲ್ ರವರು ಸಹಾಯಾನುದಾನ ಸ್ವೀಕರ್ತ ರಸೀದಿ (Grant in Aid Payee Receipt) ಬಿಲ್ಲನ್ನು ಆಂತರಿಕ ಆರ್ಥಿಕ ಸಲಹೆಗಾರರು, ಲೋಕೋಪಯೋಗಿ ಇಲಾಖೆ ಇವರಿಂದ ಮೇಲುರುಜು ಮಾಡಿಸಿ, ಈ ಸ್ವೀಕರ್ತ ರಸೀದಿಯನ್ನು ರಾಜ್ಯ ಹುಜೂರು ಖಜಾನೆ, ಬೆಂಗಳೂರು ಇಲ್ಲಿಗೆ ಸಲ್ಲಿಸಿ ಡ್ರಾ ಮಾಡತಕ್ಕದ್ದು.

ಈ ಹಣ ಬಿಡುಗಡೆ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 07 ಟಿಎಫ್‌ಪಿ 2023, ದಿನಾಂಕ: 31-07-2023 ರಲ್ಲಿ ಆಡಳಿತ ಇಲಾಖೆಯ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದ ಮೇರೆಗೆ ಹೊರಡಿಸಲಾಗಿದೆ.

**ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ**
**ಮತ್ತು ಅವರ ಹೆಸರಿನಲ್ಲಿ**

(ಹರ್ಷ ಬಿ.ವಿ.)
ಸರ್ಕಾರದ ಅಧೀನ ಕಾರ್ಯದರ್ಶಿ (ಇಎಪಿ)
ಲೋಕೋಪಯೋಗಿ ಇಲಾಖೆ

ಗೆ,
ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಿಸಲು.

ಪ್ರತಿಯನ್ನು :-
1. ಮಹಾಲೇಖಪಾಲರು (ಅಕೌಂಟ್ಸ್) ಕರ್ನಾಟಕ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, ವಿಕಾಸಸೌಧ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, ವಿಕಾಸಸೌಧ, ಬೆಂಗಳೂರು.
5. ಆಂತರಿಕ ಆರ್ಥಿಕ ಸಲಹೆಗಾರರು, ಲೋಕೋಪಯೋಗಿ ಇಲಾಖೆ, ವಿಕಾಸಸೌಧ, ಬೆಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.
7. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ, (ಆರ್ಥಿಕ ಕೋಶ) ಲೋಕೋಪಯೋಗಿ ಇಲಾಖೆ, ವಿಧಾನಸೌಧ, ಬೆಂಗಳೂರು.

8. ಜಂಟಿ ನಿರ್ದೇಶಕರು, ಸ್ಟೇಟ್ ಹುಜೂರ್ ಖಜಾನೆ, ಕೆಆರ್ ವೃತ್ತ, ಬೆಂಗಳೂರು.
9. ಜಂಟಿ ನಿರ್ದೇಶಕರು, ಟಿಎನ್ಎಮ್ಸಿ, ಖನಿಜ ಭವನ, ಬೆಂಗಳೂರು.
10. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು.
11. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ಉತ್ತರ), ಧಾರವಾಡ.
12. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ಈಶಾನ್ಯ), ಕಲಬುರಗಿ.
13. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ಕೇಂದ್ರ), ಶಿವಮೊಗ್ಗ.
14. ಪ್ರಧಾನ ಇಂಜಿನಿಯರ್, PRAMC, ಲೋಕೋಪಯೋಗಿ ಇಲಾಖೆ, ಕೆ.ಆರ್ ವೃತ್ತ, ಬೆಂಗಳೂರು ರವರಿಗೆ ವೆಬ್ ಸೈಟ್ ನಲ್ಲಿ ಪ್ರಕಟಿಸಲು.
15. ಕಡತ / ಹೆಚ್ಚುವರಿ ಪ್ರತಿಗಳು.